# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.49 ಲಿಂಗರಾಜಪುರ ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಲಿಂಗರಾಜಪುರ ವಾರ್ಡ್ ಕಛೇರಿಯ ಕಟ್ಟಡದಲ್ಲಿ ದಿನಾಂಕ: 03-09-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಹಾಜರಿದ್ದ ಸದಸ್ಯರು,

1) ಶ್ರೀ ಅಜ್ಮಲ್ ಆರೀಫ್, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2) ಶ್ರೀ ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3) ಶ್ರೀ ವೆಂಕಟೇಶ್ ವೈದ್ಯಾಧಿಕಾರಿಗಳು, ಲಿಂಗರಾಜಪುರ
4) ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ,
5) ಶ್ರೀ ಜಯಶೀಲನ್, ಸ್ಥಳೀಯರು, ಲಿಂಗರಾಜಪುರ,
6) ಮಿ॥ ಪಿಂಟೋ, ಸ್ಥಳೀಯರು, ಲಿಂಗರಾಜಪುರ,
7) ಶ್ರೀ ಉಮೇಶ್.ಆರ್, ಸ್ಥಳೀಯರು, ಲಿಂಗರಾಜಪುರ,

ಹಾಜರಿದ್ದ ಅಧಿಕಾರಿಗಳು

1) ಶ್ರೀ ಪುಟ್ಟಸ್ವಾಮಿ, ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ,
2) ಶ್ರೀ ವಿಜಯ್, ಕಿರಿಯ ಆರೋಗ್ಯ ನಿರೀಕ್ಷಕರು.
3) ಶ್ರೀ ಕೃಷ್ಣಮೂರ್ತಿ, ಕಂದಾಯ ನಿರೀಕ್ಷಕರು
4) ಕು॥ ರಜನಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು
5) ಕು॥ ಪೂಜಾ.ಎಂ, ಸಹಾಯಕ ಅಭಿಯಂತರರು, ಲಿಂಗರಾಜಪುರ

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

1) **ಘನತ್ಯಾಜ್ಯ ನಿರ್ವಹಣೆ:-**

**ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ, ರವರು ಮತ್ತು ಮಿ॥ ಪಿಂಟೋ, ಸ್ಥಳೀಯರು, ಲಿಂಗರಾಜಪುರ, ರವರು ಮಾತನಾಡಿ,** ವಾರ್ಡ್ ಪ್ರದೇಶದಲ್ಲಿ ಸಾರ್ವಜನಿಕರು ಕಸವನ್ನು ನಿರ್ದಿಷ್ಟ ಸ್ಥಳಗಳಲ್ಲಿ ಆಟೋ ಟಿಪ್ಪರ್‌ಗಳಿಗೆ ನೀಡದೇ ಎಲ್ಲಂದರಲ್ಲಿ ಎಸೆಯುತ್ತಿರುತ್ತಾರೆ ಮತ್ತು ಖಾಲಿ ನಿವೇಶನಗಳಲ್ಲಿ ತ್ಯಾಜ್ಯಗಳನ್ನು ಎಸೆಯುತ್ತಿರುತ್ತಾರೆ ಎಂದು ಸಭಾ ಗಮನಕ್ಕೆ ತಂದಾಗ, ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ನಿರೀಕ್ಷಕರು ಮಾರ್ಷಲ್‌ಗಳ

ಸಹಾಯದಿಂದ ಗಾರ್ಬೇಜ್ ಎಸೆಯುವವರನ್ನು ಪತ್ತೆ ಹಚ್ಚಿ ದಂಡವನ್ನು ವಿಧಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

2) **ಬೀದಿ ದೀಪಗಳ ನಿರ್ವಹಣೆ:–**

**ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ, ರವರು ಮಾತನಾಡಿ,** ಮುನಿತಾಯಪ್ಪ ಬಡಾವಣೆ, 1ನೇ ಅಡ್ಡರಸ್ತೆಯಲ್ಲಿ ಎರಡು ಬೀದಿ ದೀಪಗಳು ಉರಿಯುತ್ತಿರುವುದಿಲ್ಲ ಎಂದು ಸಭೆಗೆ ತಿಳಿಸಿದಾಗ, ಈ ಬಗ್ಗೆ ಚರ್ಚಿಸಲಾಗಿ, ಮಾನ್ಯ ಅಧ್ಯಕ್ಷರು ಕೂಡಲೇ ಬೀದಿ ದೀಪಗಳ ವಿಭಾಗದವರಿಗೆ ಬೀದಿ ದೀಪಗಳನ್ನು ದುರಸ್ತಿಪಡಿಸಲು ಆದೇಶಿಸಿದರು.

3) **ಬೃಹತ್ ನೀರುಗಾಲುವೆ:–** ಯಾವುದೇ ಸಮಸ್ಯೆ ಇರುವುದಿಲ್ಲ.

4) **ಆರೋಗ್ಯ ಇಲಾಖೆ:–**

ಕೋವಿಡ್–19 ಬಗ್ಗೆ ಆರೋಗ್ಯಾಧಿಕಾರಿಗಳಾದ ಶ್ರೀ ವೆಂಕಟೇಶ ರವರು ಮಾತನಾಡಿ ಪ್ರಸ್ತುತ ಲಿಂಗರಾಜಪುರದಲ್ಲಿ ಎರಡು ಕೋವಿಡ್ ಪ್ರಕರಣಗಳು ದೃಢಪಟ್ಟಿರುತ್ತವೆ. ಎರಡೂ ಪ್ರಕರಣಗಳು ಹೋಮ್ ಐಸೋಲೇಷನ್ ನಲ್ಲಿರುತ್ತವೆ ಎಂದು ಸಭೆಗೆ ತಿಳಿಸಿದರು. ಮಿಕ್ಸಡ ವ್ಯಾಕ್ಸಿನೇಷನ್‌ನ್ನು ಬೂಸ್ಟರ್ ಡೋಸ್ ಆಗಿ ನೀಡಲಾಗುತ್ತಿರುತ್ತದೆ ಮತ್ತು ಇದರ ಅವಧಿಯನ್ನು 09 ತಿಂಗಳಿನಿಂದ 06 ತಿಂಗಳಿಗೆ ಇಳಿಸಲಾಗಿರುತ್ತದೆ ಮತ್ತು ಎಲ್ಲಾ ರೀತಿಯ ಪರೀಕ್ಷೆಗಳನ್ನು ಸತತವಾಗಿ ಕೈಗೊಳ್ಳಲಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು.

5) **ಕಾಮಗಾರಿ ಇಲಾಖೆ:–** ಯಾವುದೇ ಸಮಸ್ಯೆ ಇರುವುದಿಲ್ಲ.

6) **ಕಂದಾಯ ಇಲಾಖೆ:–** ಅಧ್ಯಕ್ಷರ ಅಪ್ಪಣೆ ಮೇರೆಗೆ ಕಂದಾಯ ವಿಭಾಗದ ಅಧಿಕಾರಿಗಳು ಮತದಾರ ಪಟ್ಟಿಯನ್ನು ಪರಿಷ್ಕರಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ನೀಡಿದರು. ಮತದಾರರ ಪಟ್ಟಿಯನ್ನು ಎಲ್ಲಾ ಸದಸ್ಯರು ಕೂಲಂಕುಷವಾಗಿ ಪರಿಶೀಲಿಸಿದರು. ನಂತರ ಕಂದಾಯ ಇಲಾಖಾಧಿಕಾರಿಗಳು ಮಾತನಾಡಿ, ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಇನ್ನು ಒಂದು ವಾರದ ಅವಧಿ ಕಾಲ ವಿಸ್ತರಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ನಂತರ ಯಾವುದೇ ನ್ಯೂನ್ಯತೆ ಇದ್ದಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸಲು ಅವಕಾಶವಿರುವುದಾಗಿ ಸಭೆಗೆ ತಿಳಿಸಿದರು.

7) **ಉದ್ಯಾನವನಗಳ ವಿಭಾಗ:–** ಯಾವುದೇ ಸಮಸ್ಯೆ ಇರುವುದಿಲ್ಲ.

8) **ಅರಣ್ಯ ವಿಭಾಗ:–** ಯಾವುದೇ ಸಮಸ್ಯೆ ಇರುವುದಿಲ್ಲ.

9) **ಪಶುಸಂಗೋಪನೆ ವಿಭಾಗ:– ಮಿ॥ ಪಿಂಟೋ ರವರು ಮಾತನಾಡಿ** ವಾರ್ಡ್ ಪ್ರದೇಶದ ರಸ್ತೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವುದಾಗಿ ಸಭೆಗೆ ತಿಳಿಸಿದಾಗ, ಈ ಬಗ್ಗೆ ಚರ್ಚಿಸಲಾಗಿ, ವೆಟರಿನರಿ ವಿಭಾಗದವರಿಂದ ಕ್ರಮ ವಹಿಸಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

10) **ನೀರು ಸರಬರಾಜು:-** ಯಾವುದೇ ಸಮಸ್ಯೆ ಇರುವುದಿಲ್ಲ.

11) **ಪೊಲೀಸ್/ಸಂಚಾರ ಮತ್ತು ಕಾನೂನು ಸುವ್ಯವಸ್ಥೆ:- ಮಿ॥ ಪಿಂಟೋ ರವರು ಮಾತನಾಡಿ** ರೇಲ್ವೇ ನಿಲ್ದಾಣದ ಹತ್ತಿರ ರೈಲು ಬರುವ ನಿಗಧಿತ ಅವಧಿಯಲ್ಲಿ ಹೆಚ್ಚು ಜನಸಾಂದ್ರತೆ ಉಂಟಾಗಿ, ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಈ ಬಗ್ಗೆ ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೊಲೀಸ್ ವಿಭಾಗದವರಿಗೆ ಕ್ರಮ ವಹಿಸಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

12) **ಬೆಸ್ಕಾಂ ಇಲಾಖೆ :-** ಯಾವುದೇ ಸಮಸ್ಯೆ ಇರುವುದಿಲ್ಲ.

ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳನ್ನು ಕೂಡಲೇ ಅನುಷ್ಠಾನಕ್ಕೆ ತರಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.49, ಲಿಂಗರಾಜಪುರ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.49, ಲಿಂಗರಾಜಪುರ

**ಪ್ರತಿಯನ್ನು**

1) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.